ಪ್ರಕಟಣೆಗಾಗಿ

ಚಿತ್ರದುರ್ಗ, ಜ. 28 – ಎಲ್ಲ ಸಂಘಟನೆಗಳು ಜನಪರ ಕಾಳಜಿವುಳ್ಳವುಗಳಾದಲ್ಲಿ ಅಭಿವೃದ್ಧಿ ಸಾಧ್ಯ. ಅಭಿವೃದ್ಧಿ ಮತ್ತು ಆಧ್ಯಾತ್ಮ ಜೊತೆಜೊತೆಯಲ್ಲಿ ಸಾಗಬೇಕು ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಹೇಳಿದರು.

ಬೆಂಗಳೂರಿನ ಕಾನಿಷ್ಕ ಹೋಟೆಲ್‌ನಲ್ಲಿ ನಡೆದ ಅಸಂಖ್ಯ ಪ್ರಮಥ ಗಣಮೇಳದ ಪ್ರಚಾರ ಸಭೆಯಲ್ಲಿ ಮಾತನಾಡಿದ ಶ್ರೀಗಳು, ಎಲ್ಲ ಸಂಘಟನೆಗಳು ಆದರ್ಶವಾಗಿರಬೇಕು. ಬಸವಣ್ಣ, ಅಂಬೇಡ್ಕರ್, ಗಾಂಧೀಜಿಯವರ ಚಿಂತನೆಗಳು ಸಮಕಾಲೀನವಾಗಿವೆ. ಎಲ್ಲರೂ ಒಟ್ಟಿಗೆ ಸಾಗುವುದು, ಅಭಿವೃದ್ಧಿ, ಬಸವತತ್ತ್ವದ ಅಂಶಗಳನ್ನು ಡಾ. ಬಿ.ಆರ್. ಅಂಬೇಡ್ಕರ್‌ರವರು ಸಂವಿಧಾನದಲ್ಲಿ ಸೇರಿಸಿದ್ದಾರೆ. ಈ ಹಿನ್ನೆಲೆಯಲ್ಲಿ ದಿ. 16-2-2020ರಂದು ಆಯೋಜಿಸಿರುವ ಅಸಂಖ್ಯ ಪ್ರಮಥ ಗಣಮೇಳದಲ್ಲಿ ಎಲ್ಲ ಸಂಘಟನೆಗಳ ಪ್ರತಿನಿಧಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಒಂದು ದಾಖಲೆ ನಿರ್ಮಿಸಬೇಕೆಂದು ಕರೆ ನೀಡಿದರು.

ಸಭೆಯಲ್ಲಿ ರಿಪಬ್ಲಿಕನ್ ಪಾರ್ಟಿಯ ಡಾ. ಎಂ. ವೆಂಕಟಸ್ವಾಮಿ, ದಲಿತ ಸಂಘಟನೆಗಳ ಒಕ್ಕೂಟದ ಡಾ. ಎನ್. ಮೂರ್ತಿ, ವೈ.ಎಸ್. ದೇವೂರ್, ಬಿ.ಆರ್. ಮುನಿರಾಜ, ಬನಶಂಕರಿ ನಾಗು, ಲಯನ್ ಕೆ.ವಿ.ಬಾಲಕೃಷ್ಣ, ಸೋರಹುಣಸೆ ಎನ್. ವೆಂಕಲು, ಆರ್.ಎಂ.ಎನ್. ರಮೇಶ್, ಹೂಹಳ್ಳಿ ಪ್ರಕಾಶ, ವೆಂಕಟೇಶ್ ಎಂ. ಜೆ.ಚಂದ್ರಪ್ಪ, ಆರ್. ರಾಜೇಶ್, ಎ.ಗೋಪಿ ಮುಂತಾದವರಿದ್ದರು.